ಅಮೆರಿಕದಲ್ಲಿ ಸ್ವಾಮಿ ವಿವೇಕಾನಂದರು

ಆಂಗ್ಲ ಮೂಲ : **ಮೇರಿ ಲೂಯಿ ಬರ್ಕ್** ಸಂಗ್ರಹಾನುವಾದ : **ಸ್ವಾಮಿ ವೀರೇಶಾನಂದ**

ಭಾಗ ೧೧

ಸ್ವಾಮಿ ವಿವೇಕಾನಂದರ ಚಿಕಾಗೋ ಭಾಷಣ *(ಮುಂದುವರಿದ ಭಾಗ)*

ಸೆಪ್ಟೆಂಬರ್ ೨೭, ೧೮೯೩. ಚಿಕಾಗೋ ಸರ್ವಧರ್ಮ ಸಮ್ಮೇಳನದ ಕಡೆಯ ದಿನ. ಅಂದು ಸಾಯಂಕಾಲ ಸಮಾರೋಪ ಸಮಾವೇಶವು ಆಯೋಜಿತವಾಗಿತ್ತು. ಸುಮಾರು ಏಳು ಸಾವಿರ ಪ್ರತಿನಿಧಿಗಳು ಸಮಾವೇಶ ಆರಂಭವಾಗುವುದಕ್ಕೆ ಅರ್ಧ ಗಂಟೆಗೆ ಮುಂಚೆಯೇ ವಾಷಿಂಗ್‌ಟನ್ ಹಾಲ್ ಮತ್ತು ಕೊಲಂಬಸ್ ಹಾಲ್ – ಇವುಗಳ ಪ್ರವೇಶದ್ವಾರಗಳಲ್ಲಿ ಧಾವಿಸಿ ಒಳ ಬರಲಾರಂಭಿಸಿದರು. ಒಬ್ಬ ಪ್ರತ್ಯಕ್ಷದರ್ಶಿಯು ಹೀಗೆ ಹೇಳುತ್ತಾನೆ: ''ಇಂಥ ಮಹಾನ್ ಸಮಾರಂಭದ ಕಡೆಯ ನಿಮಿಷಗಳು ಇಂದಿಗೂ ಅದರಲ್ಲಿ ಭಾಗವಹಿಸಿದ್ದವರ ನೆನಪುಗಳಲ್ಲಿ ಉಳಿಯುತ್ತದೆ. ಪ್ರೇಕ್ಷಕರಾಗಿದ್ದ ನಾವು ನಿಜವಾಗಿಯೂ ಅದೃಷ್ಟವಂತರು. ಕೊಲಂಬಸ್ ಸಭಾಂಗಣವು ದೀಪಗಳಿಂದ ಭವ್ಯವಾಗಿ ಬೆಳಗುತ್ತಿತ್ತು. ಈ ಸಭಾಂಗಣದ ಇಂಚಿಂಚಿನಲ್ಲಿಯೂ ಪ್ರೇಕ್ಷಕರು ಕಿಕ್ಕಿರಿದು ನೆರೆದಿದ್ದರು. ವೇದಿಕೆಯ ಮೇಲೆ ಎಲ್ಲ ದೇಶಗಳು ಹಾರಾಡುತ್ತಿದ್ದವು. ಅದರ ಕೆಳಗೆ, ಎಲ್ಲ ಧರ್ಮಗಳ ಪ್ರತಿನಿಧಿಗಳು ನೆರೆದಿದ್ದರು. ಪಾಶ್ಚಾತ್ಯ ದೇಶಗಳ ಪ್ರತಿನಿಧಿಗಳು ಒಂದು ರೀತಿಯ ಮಸುಕಾದ ಉಡುಪನ್ನು ಧರಿಸಿದ್ದರು. ಇದಕ್ಕೆ ವಿರುದ್ಧವಾಗಿ, ಪೂರ್ವ ದೇಶದ ಪ್ರತಿನಿಧಿಗಳ ಉಡುಪುಗಳು ತಮ್ಮ ವರ್ಣವೈವಿಧ್ಯದಿಂದ ಬೆಳಗುತ್ತಿದ್ದವು.'' ವೇದಿಕೆಯ ಮೇಲಿದ್ದ ಈ ಐತಿಹಾಸಿಕ ಗುಂಪಿನ ಚಿತ್ರವನ್ನು ಎರಡು ಸಲ ತೆಗೆಯಲಾಯಿತು :

ಲೂಸಿ ಮೊನ್ರೋ ಎಂಬ ಮಹಿಳೆಯು ಕ್ರಿಟಿಕ್ ಎಂಬ ಪತ್ರಿಕೆಯ ಅಕ್ಟೋಬರ್ ೭, ೧೮೯೩ರ ಸಂಚಿಕೆಯಲ್ಲಿ, ಕಡೆಯ ದಿನದ ಸಮಾರೋಪ ಸಮಾರಂಭದ ಬಗ್ಗೆ ಹೀಗೆ ಬರೆಯುತ್ತಾರೆ:

''ಈ ಸಮಾರಂಭದ ದೃಶ್ಯವನ್ನು ಸುಲಭವಾಗಿ ಮರೆಯಲಾಗುವುದಿಲ್ಲ. ಈ ಸಭಾಂಗಣದ ಪ್ರತಿಯೊಂದು ಸಂದುಗೊಂದುಗಳೂ ಜನರಿಂದ ತುಂಬಿಹೋಗಿದ್ದವು... ಸರ್ವಧರ್ಮ ಸಮ್ಮೇಳನದಲ್ಲಿ ನಮ್ಮ ಮನಸ್ಸಿನ ಮೇಲೆ ಪ್ರಭಾವವನ್ನು ಬೀರಿದ ವ್ಯಕ್ತಿಗಳೆಂದರೆ ಸಿಲೋನಿನ ಧರ್ಮಪಾಲ ಮತ್ತು ಹಿಂದೂ ಸಂನ್ಯಾಸಿಯಾದ ಸ್ವಾಮಿ ವಿವೇಕಾನಂದ. ಧರ್ಮಪಾಲರು, 'ಸತ್ಯವನ್ನು ಅನ್ವೇಷಿಸುವ ನಿಮ್ಮ ರಾಜಮಾರ್ಗದಲ್ಲಿ ಯಾವುದೇ ದೈವಶಾಸ್ತ್ರ ಅಥವಾ ಕುರುಡುನಂಬಿಕೆಗಳು ಅಡೆತಡೆಯಾದರೆ, ಅವುಗಳನ್ನು ಬದಿಗೆ ಸರಿಸಿರಿ. ಯಾವುದೇ ಪೂರ್ವಗ್ರಹವಿಲ್ಲದೆ ಆಲೋಚನೆ ಮಾಡಲು, ನಿಮ್ಮ ಅಭಿಪ್ರಾಯಗಳನ್ನು ನಿರ್ಭೀತಿಯಿಂದ ವ್ಯಕ್ತಪಡಿಸಲು, ಎಲ್ಲ ಜೀವಿಗಳನ್ನೂ ಕೇವಲ ಪ್ರೇಮದ ಸಲುವಾಗಿಯೇ ಪ್ರೀತಿಸಲು, ಪವಿತ್ರಜೀವನವನ್ನು ನಡೆಸಲು ಕಲಿತುಕೊಳ್ಳಿರಿ. ಆಗ ಮಾತ್ರ ಸತ್ಯತತ್ತ್ವದ ಸೂರ್ಯಪ್ರಭೆಯು ನಿಮ್ಮನ್ನು ಬೆಳಗುವುದು' ಎಂದರು.

''ಆದರೆ ಅಂದು ಸಂಜೆ ಕೇಳಿಸಿಕೊಂಡ ಹಲವಾರು ಸಂಕ್ಷಿಪ್ತ ಭಾಷಣಗಳಲ್ಲಿ, ಅತ್ಯಂತ ವಾಗ್ಝರಿಯಿಂದ ಕೂಡಿದ್ದು ಎಂದರೆ



ಹಿಂದೂ ಸಂನ್ಯಾಸಿಯಾದ ಸ್ವಾಮಿ ವಿವೇಕಾನಂದರದ್ದು. ಅವರ ಭಾಷಣದಲ್ಲಿ ವಿಜಯದ ಉತ್ಸಾಹವು ಎದ್ದುಕಾಣುತ್ತಿತ್ತು. ಸರ್ವಧರ್ಮ ಸಮ್ಮೇಳನದ ಹಿಂದೆ ಇದ್ದ ಭಾವನೆಯನ್ನು ಮತ್ತು ಅದರ ಸೀಮಿತತೆ ಹಾಗೂ ಪ್ರಭಾವವನ್ನು ಸ್ವಾಮಿ ವಿವೇಕಾನಂದ ರಷ್ಟು ವಿದ್ವತ್ಪೂರ್ಣವಾಗಿ ವ್ಯಕ್ತಪಡಿಸಿದವರು ಬೇರೆ ಯಾರೂ ಇಲ್ಲ. ಇವರಿಗೆ ಭಾಷಣಕಲೆ ಎನ್ನುವುದು ದೈವದತ್ತವಾಗಿಯೇ ಒದಗಿಬಂದಿತ್ತು. ಅವರದು ಮೇಧಾವಿತನವನ್ನು ಎತ್ತಿತೋರಿಸು ತ್ತಿದ್ದ ಪ್ರಭೆಯುಳ್ಳ ಮುಖಮಂಡಲ; ತಮ್ಮ ಆಕರ್ಷಕವಾದ ಹಳದಿ ಮತ್ತು ಕಿತ್ತಳೆಯ ಬಣ್ಣದ ಪೋಷಾಕಿನ ಹಿನ್ನೆಲೆಯಲ್ಲಿ ಅವರ ವ್ಯಕ್ತಿತ್ವವು ಎದ್ದುಕಾಣುತ್ತಿತ್ತು. ಹಾಗೆಯೇ ಅವರ ಮಾತು ಗಳಲ್ಲಿ ಪ್ರಾಮಾಣಿಕತೆ ಎದ್ದುತೋರುತ್ತಿತ್ತು. ಮಾತುಗಳು ಅರ್ಥ ಗರ್ಭಿತವಾಗಿದ್ದವು. ಅವರ ಭಾಷಣವನ್ನು ಕೇಳುವುದು ಸಂಗೀತ ವನ್ನು ಕೇಳಿದಂತೆ ಇತ್ತು.''

ಸ್ವಾಮಿ ವಿವೇಕಾನಂದರು ಸರ್ವಧರ್ಮ ಸಮ್ಮೇಳನದ ಮೂಲಕ ಸ್ವಾಮೀಜಿಯವರು ಅಪಾರವಾದ ಜನಪ್ರಿಯತೆಯನ್ನೂ, ಪ್ರಭಾವ ವನ್ನೂ ಗಳಿಸಿಕೊಂಡರು. ಇದರ ಬಗ್ಗೆ 'ಚಿಕಾಗೋ ಇಂಟರ್ ಓಷನ್' ಎಂಬ ಪತ್ರಿಕೆಯು ಒಂದು ವರ್ಷದ ನಂತರ ಅಂದರೆ, ಸೆಪ್ಟೆಂಬರ್ ೧, ೧೮೯೪ರ ತನ್ನ ಸಂಚಿಕೆಯಲ್ಲಿ ಈ ವರದಿಯನ್ನು ಪ್ರಕಟಿಸಿತು:

ವಿವೇಕಾನಂದ ಮತ್ತು ಹಿಂದೂ ಜನಾಂಗ

ಚಿಕಾಗೋದ ಸರ್ವಧರ್ಮ ಸಮ್ಮೇಳನದಲ್ಲಿ ಭಾರತೀಯ ಹಿಂದೂಗಳನ್ನು ಪ್ರತಿನಿಧಿಸಿದ ಸ್ವಾಮಿ ವಿವೇಕಾನಂದರಷ್ಟು ಬೇರೆ ಯಾವ ಪ್ರತಿನಿಧಿಯೂ ಜನರನ್ನು ಆಕರ್ಷಿಸಲಿಲ್ಲ ಎಂದೇ ಹೇಳ ಬೇಕು. ಅವರದು ಎಲ್ಲರನ್ನೂ ಸೆಳೆಯುವಂಥ ನಡತೆ, ಸಾಮರ್ಥ್ಯ. ತಮ್ಮ ಧರ್ಮದ ಬಗೆಗೆ ಪ್ರೇಕ್ಷಕರು ಕೇಳಿದ ಎಲ್ಲ ಪ್ರಶ್ನೆಗಳಿಗೂ ಅವರು ಯಾವ ಭಯವಿಲ್ಲದೆ ಉತ್ತರ ಕೊಟ್ಟರು; ಚರ್ಚೆಯನ್ನು ನಡೆಸಿದರು. ಈ ಸನ್ಮಾನ್ಯ ಹಿಂದೂ ಪ್ರತಿನಿಧಿಯು ಪಾಶ್ಚಾತ್ಯ ಜಗತ್ತಿನ ಬಗ್ಗೆ ತಮ್ಮ ಪ್ರಶಂಸೆಯನ್ನು ಉತ್ಸಾಹಭರಿತವಾಗಿ ಮಾಡು ತ್ತಿದ್ದರು. ತಮ್ಮ ಜನರ ಕಲ್ಯಾಣಕ್ಕಾಗಿ ಹೊಸ ಹೊಸ ವಿಷಯ ಗಳನ್ನು ಅರಿತುಕೊಳ್ಳುವುದರಲ್ಲಿ ಅಪಾರ ಆಸಕ್ತಿಯನ್ನು ತೋರಿಸು ತ್ತಿದ್ದರು. ವಿವಿಧ ಧರ್ಮಗಳ ಅನುಯಾಯಿಗಳ ಜೊತೆಗೆ ಸೌಹಾ ರ್ದವನ್ನು ಬೆಳೆಸಿಕೊಳ್ಳುವ, ಅವುಗಳ ಸದ್ಗುಣ ಮತ್ತು ಶಕ್ತಿಗಳನ್ನು ಪ್ರಾಮಾಣಿಕವಾಗಿ ಕಾಣುವ ಮಹದಾಸೆ ಅವರದಾಗಿತ್ತು. ಆದರೆ ಇದೇ ಸಮಯದಲ್ಲಿ ಸ್ವಾಮಿ ವಿವೇಕಾನಂದರು ಹಿಂದೂಧರ್ಮ ಮತ್ತು ತತ್ತ್ವಶಾಸ್ತ್ರಗಳನ್ನು ತಮ್ಮ ವಾಗ್‌ಝರಿ ಮತ್ತು ವಾಕ್‌ಶಕ್ತಿ ಗಳಿಂದ ಪ್ರಬಲವಾಗಿ ಪ್ರತಿಪಾದಿಸಿದರು. ಇದು ಅವರಿಗೆ ಮಾತ್ರ ವಲ್ಲ , ಅವರ ಬೋಧನೆಗಳಿಗೂ ಅಪಾರವಾದ ಪ್ರಶಂಸೆಯನ್ನು ತಂದುಕೊಟ್ಟಿತು.

ಸ್ವಾಮಿ ವಿವೇಕಾನಂದರನ್ನು 'ನ್ಯೂಯಾರ್ಕ್ ವರ್ಲ್ಡ್' ಎಂಬ ಪತ್ರಿಕೆಯು ಸರ್ವಧರ್ಮ ಸಮ್ಮೇಳನದ ಮಹತ್ವದ ಬಗ್ಗೆ ಸಂಕ್ಷಿಪ್ತ ವಾಗಿ ಹೇಳುವಂತೆ ವಿನಂತಿ ಮಾಡಿಕೊಂಡಿತು. ಅದಕ್ಕೆ ಸ್ವಾಮೀಜಿ ಯವರು ನೀಡಿದ ಉತ್ತರವನ್ನು ಈ ಪತ್ರಿಕೆಯು ತನ್ನ ಅಕ್ಟೋ ಬರ್ ೧, ೧೮೯೩ರ ಸಂಚಿಕೆಯಲ್ಲಿ ಪ್ರಕಟಮಾಡಿತು. ಇದರಲ್ಲಿ ಸ್ವಾಮೀಜಿ ಭಗವದ್ಗೀತೆಯ ಮತ್ತು ವ್ಯಾಸನ ಉಕ್ತಿಗಳನ್ನು ಉದಾ ಹರಿಸುತ್ತಾರೆ:

''ನಾನು ಎಲ್ಲ ಧರ್ಮಗಳಲ್ಲೂ ಇರುವ ಪರಮಪುರುಷನು; ನಾನು ಮಣಿಗಳ ಹಾರದಲ್ಲಿ ಸಾಗಿಹೋಗುವ ದಾರದಂತೆ ಇದ್ದೇನೆ.'' ''ಎಲ್ಲ ಮತಗಳಲ್ಲಿಯೂ ಪವಿತ್ರರಾದ, ಪರಿಪೂರ್ಣ ರಾದ ಸಂತರು ಕಾಣಸಿಗುತ್ತಾರೆ. ಆದ್ದರಿಂದ ಎಲ್ಲ ಧರ್ಮಗಳೂ ಒಂದೇ ಸತ್ಯದ ಕಡೆಗೆ ಸಾಗುತ್ತವೆ. ವಿಷದಿಂದ ಅಮೃತವು ಹೇಗೆ ತಾನೇ ಹೊರ ಹೊಮ್ಮಲು ಸಾಧ್ಯ?''

ಸ್ವಾಮೀಜಿಯವರು ಸಮಾರೋಪ ಸಮಾರಂಭದಲ್ಲಿ ಮಾಡಿದ ಭಾಷಣ ಅತ್ಯಂತ ಪ್ರಸಿದ್ಧವಾದುದು. ಅದು ಸರ್ವಧರ್ಮ ಸಮ್ಮೇ ಳನದ ಒಟ್ಟಾರೆ ಉದ್ದೇಶವನ್ನು ಸಮರ್ಥವಾಗಿ ವ್ಯಕ್ತಪಡಿಸುತ್ತದೆ :

''ಸರ್ವಧರ್ಮ ಸಮ್ಮೇಳನ ಜಗತ್ತಿಗೆ ಏನನ್ನಾದರೂ ಪ್ರಕಟ ಪಡಿಸಿದ್ದರೆ ಅದು ಇದು : ಪಾವಿತ್ರ್ಯ, ಪರಿಶುದ್ಧತೆ, ದಾನ, ದಯೆಗಳು ಯಾವುದೇ ಒಂದು ಧರ್ಮದ ಸ್ವಂತ ಅಸ್ತಿ ಅಲ್ಲ; ಪ್ರತಿಯೊಂದು ಧರ್ಮವೂ ಅತ್ಯಂತ ಉದಾರಚರಿತರಾದ ಸ್ತ್ರೀ ಪುರುಷರನ್ನು ರೂಪಿಸಿದೆ. ಇಷ್ಟೆಲ್ಲ ಸಾಕ್ಷ್ಯಾಧಾರಗಳು ಇರುವಾಗ ಯಾರಾದರೂ ತನ್ನ ಧರ್ಮವೊಂದೇ ಉಳಿಯತಕ್ಕದ್ದು, ಇತರ ಧರ್ಮಗಳು ನಾಶಹೊಂದತಕ್ಕವು ಎಂದು ಭ್ರಾಂತಿಯಲ್ಲಿದ್ದರೆ ಅವನ ವಿಷಯದಲ್ಲಿದ್ದರೆ ಅವನ ವಿಷಯದಲ್ಲಿ ನನಗೆ ಅಪಾರ ವಾದ ಮರುಕವಿದೆ. ಅವನಿಗೆ ನಾನು ಹೇಳುವುದಿಷ್ಟೆ – ಯಾರು ಎಷ್ಟೇ ವಿರೋಧಿಸಿದರೂ, ಪ್ರತಿಯೊಂದು ಧರ್ಮದ ಧ್ವಜದ ಮೇಲೂ ಬಹುಬೇಗ ಈ ಮಾತುಗಳು ಬರೆಯಲ್ಪಡುತ್ತವೆ. 'ಹೋರಾಟವಲ್ಲ ; ಸೌಹಾರ್ದ', 'ವಿನಾಶವಲ್ಲ , ಸ್ವೀಕಾರ', 'ವೈಮನಸ್ಯವಲ್ಲ, ಸಾಮರಸ್ಯ ಮತ್ತು ಶಾಂತಿ'. ''

ಸ್ವಾಮಿ ವಿವೇಕಾನಂದರ ಪಾಶ್ಚಾತ್ಯ ಕಾರ್ಯದಲ್ಲಿ ಸರ್ವ ಧರ್ಮ ಸಮ್ಮೇಳನವು ಮೊದಲ ಮೈಲುಗಲ್ಲು. ಇದು ಅವರಿಗೆ ಅಮೆರಿಕದ ಜನರ ಪ್ರೀತಿಯನ್ನೂ, ಮೆಚ್ಚುಗೆಯನ್ನೂ ಗಳಿಸಿ ಕೊಟ್ಟಿತು. ಅವರು ಜನಮಾನಸದಲ್ಲಿ ಭವ್ಯವಾಗಿ ಬೇರೂರಿದರು. ತಮ್ಮ ತಾಯ್ನಾಡಿಗೆ ಇಡೀ ವಿಶ್ವದಲ್ಲಿ ಗೌರವವನ್ನು ತಂದು ಕೊಟ್ಟರು. ಅಪಾರ ಜನಪ್ರಿಯತೆಯನ್ನು ಪಡೆದುಕೊಂಡರು. ಇನ್ನು ಮುಂದೆ ಸ್ವಾಮೀಜಿ ತಮ್ಮ ಈ ದಿವ್ಯಕಾರ್ಯವನ್ನು ಹೇಗೆ ಮುಂದುವರಿಸಿದರು ಎನ್ನುವುದು ಆಸಕ್ತಿಕರವಾದ ವಿಷಯ. ಅದನ್ನು ಮುಂದಿನ ಸಂಚಿಕೆಯಲ್ಲಿ ನೋಡೋಣ.

(ಮುಂದುವರಿಯುವುದು)

ಶ್ರೀಮಾತೆಯವರ ಉಪದೇಶಗಳು

ಶ್ರೀರಾಮಕೃಷ್ಣರು ಹೇಳುತ್ತಿದ್ದರು, 'ಮಾಯೆಯ ಸಮುದ್ರದಲ್ಲಿ ನೆಗೆದುಬಿಡಬೇಡ ; ಅಲ್ಲಿರುವ ತಿಮಿಂಗಲ, ಮೊಸಳೆಗಳು ತಿಂದುಬಿಡಬಹುದು' ಅಂತ. ಚಿಂತಿಸಬೇಡ, ನಿಮಗೆ ಶ್ರೀರಾಮಕೃಷ್ಣರಿದ್ದಾರೆ.

ಶಿಷ್ಯ : ಅಮ್ಮಾ, ನಾನು ಯಾವ ರೀತಿ ಆಧ್ಯಾತ್ಮಿಕ ಜೀವನ ನಡೆಸಲಿ?

ಶ್ರೀಮಾತೆ: ಈಗ ಹೇಗೆ ನಡೆಸುತ್ತಿದ್ದೀಯೋ ಹಾಗೆಯೇ ನಡೆಸು. ಶ್ರೀರಾಮಕೃಷ್ಣರನ್ನು ವ್ಯಾಕುಲತೆಯಿಂದ ಪ್ರಾರ್ಥಿಸು. ಯಾವಾಗಲೂ ಅವರ ಸ್ಮರಣೆ, ಮನನ ಮಾಡುತ್ತಿರು.

ಶಿಷ್ಯ : ದೊಡ್ಡ ದೊಡ್ಡ ಮಹಾಪುರುಷರೇ ಪತನ ಹೊಂದಿರುವುದನ್ನು ನೋಡಿ ನನಗೆ ತುಂಬ ಭಯವಾಗುತ್ತಿದೆ, ಅಮ್ಮಾ.

ಶ್ರೀಮಾತೆ: ಭೋಗದ ವಸ್ತುಗಳು ನಮ್ಮ ಸುತ್ತಮುತ್ತ ಇದ್ದರೆ ಅವನ್ನು ಅನುಭವಿಸುವ ಇಂದ್ರಿಯಗಳೂ ಅತ್ತ ಸೆಳೆಯಲ್ಪಡುತ್ತವೆ. ಮಗೂ, ಹೆಂಗಸಿನ ಮರದ ಪ್ರತಿಮೆಯಾದರೂ ಸರಿ, ಆ ಕಡೆಗೆ ನೋಡಬೇಡ, ಅತ್ತ ಹೋಗಬೇಡ.

ಶಿಷ್ಯ : ಮನುಷ್ಯ ಏನೂ ಮಾಡಲಾರ, ಭಗವಂತನೇ ಎಲ್ಲವನ್ನೂ ಮಾಡಿಸುತ್ತಾನೆ.

ಶ್ರೀಮಾತೆ: ಅವನೇ ಎಲ್ಲವನ್ನೂ ಮಾಡಿಸುತ್ತಾನೆ ನಿಜ. ಆದರೆ ಈ ಅರಿವು ಮನುಷ್ಯನಿಗೆಲ್ಲಿರುತ್ತದೆ? ಜನ ಅಹಂಕಾರದಿಂದ ಮತ್ತರಾಗಿ ತಾವೇ ಎಲ್ಲವನ್ನೂ ಮಾಡುತ್ತೇವೆ ಎಂದು ಭಾವಿಸುತ್ತಾರೆ ; ಭಗವಂತನ ಮೇಲೆ ನಿರ್ಭರರಾಗುವುದಿಲ್ಲ. ಯಾರು ಅವನಲ್ಲೇ ನಿರ್ಭರರಾಗಿರುತ್ತಾರೋ ಅವರನ್ನು ಭಗವಂತನು ಎಲ್ಲ ವಿಪತ್ತುಗಳಿಂದಲೂ ಪಾರುಮಾಡುತ್ತಾನೆ.

'ಶ್ರೀಶಾರದಾದೇವಿ ವಚನವೇದ', ಪು.೨೯೩ –೩೧೬

ಯುವಚೇತನ



ಜಗನ್ಮಾತೆ

ಭಗವತ್ ಶಕ್ತಿಯ ಪ್ರಥಮ ಅಭಿವ್ಯಕ್ತಿಯೇ ತಾಯಿ. ಈ ಭಾವನೆಯನ್ನು ತಂದೆಗಿಂತ ಮೇಲು ಎಂದು ಪರಿಗಣಿಸುವರು. ತಾಯಿಯ ಹೆಸರಿನೊಂದಿಗೆ ಸರ್ವಶಕ್ತವಾದ ದೈವೀ ಶಕ್ತಿಯ ಭಾವನೆ ಬರುವುದು. ಮಗು ತನ್ನ ತಾಯಿ ಸರ್ವಶಕ್ತಳು, ಅವಳು ಏನನ್ನು ಬೇಕಾದರೂ ಮಾಡಬಲ್ಲಳು ಎಂದು ನಂಬುವುದು. ಜಗನ್ಮಾತೆಯೇ ನಮ್ಮಲ್ಲಿ ಸುಪ್ತವಾಗಿರುವ ಕುಂಡಲಿನಿ. ಅವಳನ್ನು ಪೂಜಿಸದೆ ನಮ್ಮನ್ನು ನಾವು ಅರಿಯಲಾರೆವು. ಜಗನ್ಮಾತೆ ಕರುಣಾಮಯಳು, ಸರ್ವಶಕ್ತಳು, ಸರ್ವವ್ಯಾಪಿನಿ. ಪ್ರಪಂಚದಲ್ಲಿರುವ ಶಕ್ತಿಯ ಮೊತ್ತವೇ ಇವಳು. ಪ್ರಪಂಚದಲ್ಲಿರುವ ಪ್ರತಿಯೊಂದು ಶಕ್ತಿಯ ಅಭಿವ್ಯಕ್ತಿಯೂ ತಾಯಿಯೇ. ಇವಳೇ ಚೇತನ, ಬುದ್ಧಿ, ಪ್ರೇಮ, ಇವಳೇ ವಿಶ್ವ. ಆದರೂ ಅದರಿಂದ ಬೇರೆ ಇರುವಳು.

ಯಾವ ಕ್ಷಣದಲ್ಲಿ ಬೇಕಾದರೂ, ಯಾವ ಆಕಾರದ ಮೂಲಕವಾಗಿ ಬೇಕಾದರೂ ಇವಳು ನಮಗೆ ಗೋಚರಿಸಬಲ್ಲಳು. ಜಗನ್ಮಾತೆ ನಾಮರೂಪಗಳನ್ನು ಬೇಕಾದರೆ ಇಟ್ಟುಕೊಂಡಿರಬಲ್ಲಳು. ಅಥವಾ ಆಕಾರವಿಲ್ಲದೆ ಕೇವಲ ನಾಮಗಳನ್ನು ಮಾತ್ರ ಇಟ್ಟುಕೊಂಡಿರಬಲ್ಲಳು. ನಾವು ಇವಳನ್ನು ಈ ಭಾವಗಳ ಮೂಲಕ ಉಪಾಸನೆ ಮಾಡಿದಾಗ, ನಾವೂ ಕೂಡ ನಾಮರೂಪಗಳಿಗೆ ಅತೀತವಾದ ಪರಿಶುದ್ಧ ಸ್ಥಿತಿಗೆ ಬರಬಹುದು.

— **ಸ್ವಾಮಿ ವಿವೇಕಾನಂದ** *('ಕೃತಿಶ್ರೇಣಿ, ಸಂ.೧, ಪು.೨೭೫)*

Statement about ownership and other particulars about Viveka Prabha (according to Form IV Rule 8, circulated by Registrar of Newspapers for India)

1. Place of Publication	:	**Mysore 570 020**
2. Periodicity of Publication	:	**Monthly**
3. Printer's Name	:	**Swami Muktidananda**
Nationality	:	**Indian**
Address	:	**Adhyaksha, Sri Ramakrishna Ashrama, Yadavagiri, Mysore 570 020**
4. Publisher's Name	:	**Swami Muktidananda**
Nationality	:	**Indian**
Address	:	**Adhyaksha, Sri Ramakrishna Ashrama, Yadavagiri, Mysore 570 020**
5. Editor's Name	:	**Swami Jnanayogananda**
Nationality	:	**Indian**
Address	:	**Sri Ramakrishna Ashrama Yadavagiri Mysore 570 020**
6. Name & Addresses of the individuals who own the newspaper and partners or share-holders holding more than 1% of the capital	:	**Adhyaksha, Sri Ramakrishna Ashrama, Yadavagiri Mysore 570 020**

I, Swami Muktidananda, hereby declare that the particulars given above are true to the best of my knowledge and belief.

sd.
Swami Muktidananda
01.04.2022 Signature of the publisher